# ಬಾ ಗೆಳೆಯ!

ಗೆರೆ ಮಾಸಿದ ಚಕ್ರಗಳ ಮೇಲೆ ಕುಳಿತು
ಹುಬ್ಬು ಗಂಟಿನ ಗೆರೆ ಮೂಡಿಸಿ ಹಣೆಬರಹವ
ಲೆಕ್ಕ ಹಾಕುವೆಯಾ ಗೆಳೆಯಾ!

ಬಿಡು, ಹೋದವವು ಆ ದಿನಗಳು
ಗಾಲಿಗಳ ಹಿಂದೆ ಓಡಿ ಆಟವಾಡಿದ ಕ್ಷಣಗಳು

ಜಾತ್ರೆಯ ನಡುವಲ್ಲಿ ಕಣ್ಣುಮುಚ್ಚಾಲೆ
ಆಟವಾಡಿ ದೊಡ್ಡ ಚಕ್ರದ ಬುಟ್ಟಿಯಲ್ಲಿ
ಕುಳಿತು ಮಜಾ ಮಾಡಿದ ದಿನಗಳು


ಗೆಳೆಯನ ಸೈಕಲ್ ಗಾಲಿಯ ಗಾಳಿ ತೆಗೆದು
ಗೋಳಾಡಿಸಿ ನಕ್ಕ ಮಜವಾದ ಘಳಿಗೆಗಳು

ಗೊತ್ತು, ಜೀವನ ಚಕ್ರದ ಸುತ್ತುಗಳಲ್ಲಿ
ಸೋತು ಸುಣ್ಣವಾಗಿರುವೆ
ಚಿಂತೆಯ ಸುರುಳಿಗಳು
ಮೈ ಸುತ್ತಿವೆ ಬಿಗಿಯಾಗಿ

ಆದರೆ, ಸುಖ ದುಃಖದ ಗಾಲಿಯಲ್ಲಿ
ಮೇಲೆ ಹೋದವ ಕೆಳಗೆ ಬರುವನಂತೆ
ಹಾಗೆ ನಿನ್ನ ಸುಖ ಸಂತೋಷದ
ದಿನಗಳು ಮತ್ತೆ ಬಂದಾವು
ಮತ್ತೆ ನಿನ್ನ ಮುಖದಲ್ಲಿ ನಗೆ ಮೂಡುವುದು

ಬಿಡು ದುಃಖ ದುಮ್ಮಾನ
ನಡೆ ಆ ಚೌಕದ ಕಡೆಗೆ, ಚಹಾದಂಗಡಿಗೆ
ಕುಳಿತು ಒಂದಿಷ್ಟು ನಗೆಗಳ ಹಂಚಿಕೊಳ್ಳೋಣ
ನನ್ನದೊಂದಿಷ್ಟು ನೀ ಕೇಳು
ನಿನ್ನದೊಂದಿಷ್ಟು ನಾ ಕೇಳುವೆ
ದಾರಿ ಸುಖವಾಗಿ ಸವೆಯೋಣ ಬಾ.

● **ಗಿರೀಶ ನಾನಾವಟೆ**



# ವಿರಾಮ

ಒಂದರಮೇಲೊಂದು ನಿರೀಕ್ಷೆ,
ಜೋಡಿಸಿಟ್ಟ ಟೈರುಗಳಂತೆ;
ಆಸೆಗಳ ಮೇಲೆ ಕುಳಿತು
ಜಗದ ನಾಟಕ ನೋಡುತಿರುವ
ವೀಕ್ಷಕ ನಾನು

ಒರಗಲೊಂದು ಗೋಡೆ,
ಉಡಲೊಂದು ಬಟ್ಟೆ.
ನಿಲ್ಲದ ಸಮಯದ ಜೊತೆ
ಓಡಿ ಓಡಿ ಸುಸ್ತಾಗಿ ಕುಳಿತ
ಹಸುಗೂಸು ನಾನು

ಮುಂದೆ ಕೆಟ್ಟು ನಿಂತ ಲಾರಿ
ಓಡಲಾರದ ಬದುಕು;
ಜಂಜಾಟಗಳಿಂದ ವಿರಾಮ ಪಡೆದು
ಎಲ್ಲವನು ಕಂಡರೂ ಕಾಣದಂತಿರುವ
ಯೋಗಿ ನಾನು.

● **ವೇದಾ ಸತ್ಯನಾರಾಯಣ**